# 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| **S.C.No** : | 231/2022 |
|---|---|

| | | |
|---|---|---|
| ಸಾಕ್ಷಿದಾರರ ಹೆಸರು | ಅರುಣ ಕುಮಾರ್ | |
| ತಂದೆಯ ಹೆಸರು | ಬೋರೆಗೌಡ | ಸಾಕ್ಷಿಗೆ **ದಿಃ 24.02.2023** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 39 ವರ್ಷ | |
| ಉದ್ಯೋಗ | ಅಕ್ಕಿ ಗಿರಣಿಯಲ್ಲಿ ಕೆಲಸ | ಪಿ.ಡಬ್ಲ್ಯೂ–11 |
| ವಾಸ ಸ್ಥಳ | ಮೇಟಗಳ್ಳಿ ಮೈಸೂರು ನಗರ. | ಸಿ.ಡಬ್ಲ್ಯೂ–28 |

**ಮುಖ್ಯ ವಿಚಾರಣೆ:– ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–**

ನನಗೆ ಮಹದೇವ ಈತನ ಪರಿಚಯ ಇರುವುದಿಲ್ಲ. ಮಹದೇವ ಈತನನ್ನು ನಾನು ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆ. ದಿಃ 09.10.2021 ರಂದು ಬೆಳಿಗ್ಗೆ 11.00 ಗಂಟೆಗೆ ಪೊಲೀಸರು ಠಾಣೆಗೆ ಕರೆದು ಹೆಬ್ಬಾಳ, 1 ನೇ ಹಂತ, 2 ನೇ ಕ್ರಾಸ್ ನಲ್ಲಿ ಅಜ್ಜಿಯನ್ನು ಮೊಮ್ಮಕ್ಕಳು ಕೊಲೆ ಮಾಡಿದ್ದಾರೆ ಅವರು ಉಪಯೋಗಿಸಿದ ಕಸದ ಬುಟ್ಟಿಯಲ್ಲಿ ಹಾಕಿ ಮಹದೇವನ ಆಟೋದಲ್ಲಿ ಹಾಕಿದ್ದಾರೆ ಎಂದು ತಿಳಿಸಿದರು. ಮಹದೇವ ಈತನು ತನ್ನ ಆಟೋದಲ್ಲಿ ಕಸ ತೆಗೆದುಕೊಂಡು ಹೋಗಿ ಸುಮುಖ ಶಾಲೆಯ ಹಿಂದುಗಡೆ ಹೈ ಟೇನಷನ್ ಲೈನ್ ಹತ್ತಿರ ಇರುವ ಕಂಟೇನರಗೆ ಆಟೋದಲ್ಲಿ ಇರುವ ಕಸವನ್ನು ಮಹದೇವ ಡಂಪ್ ಮಾಡಿರುತ್ತಾನೆ. ಪೊಲೀಸರು ನಮ್ಮನ್ನು ಹೈ ಟೇನಷನ್ ಲೈನ್ ಹತ್ತಿರ ಕರೆದುಕೊಂಡು ಹೋಗಿ ಮಧ್ಯಾಹ್ನ 12.00 ರಿಂದ 12.45 ಗಂಟೆಯವರೆಗೆ ಪಂಚನಾಮೆ ಮಾಡಿ ಸಹಿ ತೆಗೆದುಕೊಂಡಿರುತ್ತಾರೆ. ಪಂಚನಾಮೆ ಈಗಾಗಲೇ ನಿಪಿ–20 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಇರುವ ಸಾಕ್ಷಿ ಸಹಿಯನ್ನು ನಿಪಿ–20(ಬಿ) ಎಂದು ಗುರುತಿಸಲಾಯಿತು. ಸ್ಥಳವನ್ನು ಪೌರ ಕಾರ್ಮಿಕ ಮಹದೇವ ತೋರಿಸಿರುತ್ತಾನೆ. ಸಾಕ್ಷಿಯು

ಪೋಟೋಗಳನ್ನು ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-21 ಮತ್ತು ನಿಪಿ-22 ಎಂದು ಗುರುತಿಸಲಾಗಿದೆ.

**ಪಾಟೀಸವಾಲು :- ಆರೋಪಿತರ ಪರ ವಕೀಲರಾದ ಎನ್.ಎನ್.ಆರ್ ರವರಿಂದಃ-**

ನಾನು 8 ನೇ ತರಗತಿ ವರೆಗೆ ಓದಿರುತ್ತೇನೆ. ನಾನು ಅಕ್ಕಿ ಗಿರಣಿಯಲ್ಲಿ ಮಷೀನ್ ಆಫರೇಟ್ ಮಾಡುತ್ತೇನೆ. ಸದರಿ ಅಕ್ಕಿ ಗಿರಣಿಯಲ್ಲಿ ನಾನು ಬೆಳಿಗ್ಗೆ 5.30 ಗಂಟೆಯಿಂದ ರಾತ್ರಿ 9.00 ಗಂಟೆಯ ವರೆಗೆ ಕೆಲಸ ಮಾಡುತ್ತೇನೆ. ಕೆಲಸ ಇದ್ದರೆ ಮಾತ್ರ ನಾನು ಕೆಲಸಕ್ಕೆ ರಜೆ ಹಾಕುತ್ತೇನೆ. ಪೊಲೀಸರು ಲಿಖಿತವಾಗಿ ನನಗೆ ನೋಟಿಸ್ ಕೊಟ್ಟಿರುವುದಿಲ್ಲ. ನಾವು ಟೀ ಕುಡಿಯುುತ್ತಾ ಕುಳಿತಾಗ ನಮ್ಮನ್ನು ಪೊಲೀಸರು ಕರೆದಿರುತ್ತಾರೆ. ಫ್ರಾಸಾ-9 ಇವರು ನನಗೆ ಪರಿಚಯಸ್ಥರು ಇರುವುದಿಲ್ಲ. ದಿಃ 09.10.2021 ರಂದು ನಮಗೆ ಪೊಲೀಸರು ಠಾಣೆಗೆ ಕರೆಸಿದ್ದರು. ಕೇಸಿನ ಬಗ್ಗೆ ಪೊಲೀಸರು ನಮಗೆ 15 ರಿಂದ 30 ನಿಮೀಷದವರೆಗೆ ಹೇಳಿರುತ್ತಾರೆ. ಮಹಜರನ್ನು ಪೊಲೀಸ್ ಇನ್ಸಪೇಕ್ಟರ ಪ್ರಸಾದ್ ಎನ್ನುವವರು ಬರೆದಿರುತ್ತಾರೆ. ಮಹಜರ ಪೊಲೀಸ್ ಠಾಣೆಯಲ್ಲೆ ಬರೆದಿರುತ್ತಾರೆ. ಕಸದಲ್ಲಿ ಏನು ಇತ್ತು ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿ ಇದೆ. ನನ್ನ ಮುಂದೆ ಯಾವುದೇ ಮಹಜರ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಬಿಳಿ ಪೇಪರ ಮೇಲೆ ಪೊಲೀಸ್ ಠಾಣೆಯಲ್ಲಿ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು